ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 23-03-1970.

***ಗತಿಸಿ ಹೋದದ್ದು ಗತಿಸಿ ಹೋಯಿತು ಎಂದು ಭಾವಿಸುವುದೇ ಸತ್ಯ ಹೋಳಿಯ ಆಚರಣೆಯಾಗಿದೆ.***

(सच्ची होली मनाना अर्थात् बीती को बीती करना)

ಬಾಪ್ ದಾದಾ ಏನನ್ನು ನೋಡುತ್ತಾರೆ ಮತ್ತು ತಾವು ಏನನ್ನು ನೋಡುತ್ತೀರಿ? ತಾವೂ ನೋಡುತ್ತಿರುವಿರಿ ಮತ್ತು ಬಾಪ್ ದಾದಾ ಕೂಡಾ ನೋಡುತ್ತಿದ್ದಾರೆ. ಆದರೆ ಅಂತರವಿದೆಯಾ ಅಥವಾ ಒಂದೇ ಆಗಿದೆಯಾ? ಆತ್ಮಿಕ ಮಕ್ಕಳನ್ನು ನೋಡುತ್ತಾ ಯಾವ ಮಾತನ್ನು ಇಂದು ವಿಶೇಷ ನೋಡುತ್ತಿದ್ದಾರೆ? ಪ್ರತಿಯೊಂದು ನಡತೆಯ ವಿಶೇಷತೆಯಿದೆಯಲ್ಲವೇ? ಇಂದು ಭೇಟಿಯಲ್ಲಿ ವಿಶೇಷ ಯಾವ ಮಾತನ್ನು ನೋಡುತ್ತಿದ್ದಾರೆ? ಇಂದು ವಿಶೇಷ ಮಾತನ್ನು ನೋಡುತ್ತಿದ್ದಾರೆ ಮತ್ತು ನೋಡಿ ಖುಷಿ ಪಡುತ್ತಿದ್ದಾರೆ. ಬಾಪ್ ದಾದಾ ಪ್ರತಿಯೊಬ್ಬರ ಪುರುಷಾರ್ಥದ ವೇಗವನ್ನು ಮತ್ತು ಸ್ಥಿತಿಯ ಉತ್ಸುಕತೆಯನ್ನು ನೋಡುತ್ತಿದ್ದಾರೆ. ಎಷ್ಟೆಷ್ಟು ಉತ್ಸುಕತೆಯಿರುವುದೋ ಅಷ್ಟು ವೇಗವಿರುವುದು. ಇದನ್ನು ನೋಡಿ ಹರ್ಷಿತವಾಗುತ್ತಿದ್ದಾರೆ. ಗತಿ ತೀವ್ರವಾಗಿರುವುದರಿಂದ ಸೇವೆಯಲ್ಲಿ ಸಫಲತೆ ತೀವ್ರವಾಗಿರುವುದು. ಇಂದು ಹೋಳಿ ಹೇಗೆ ಆಚರಿಸಿದಿರಿ. (ಸೂಕ್ಷ್ಮವತನದಲ್ಲಿ ಆಚರಿಸಿದೆವು) ವತನದಲ್ಲಿಯೂ ಹೇಗೆ ಆಚರಿಸಿದಿರಿ? ಕೇವಲ ವತನದಲ್ಲಿ ಆಚರಿಸಿದಿರೋ ಅಥವಾ ಇಲ್ಲಿಯೂ ಆಚರಿಸಿದಿರೋ? ಕೇವಲ ಅವ್ಯಕ್ತ ರೂಪದಲ್ಲಿಯೇ ಆಚರಿಸಿದಿರಾ? ಹೋಳಿ ಆಚರಣೆ ಎಂದರೆ ಸದಾ ಕಾಲಕ್ಕೂ ಇಂದಿನ ದಿನ ಕಳೆದದ್ದು ಕಳೆದುಹೋಯಿತು ಎಂಬ ಪಾಠ ಪಕ್ಕಾ ಮಾಡಿಕೊಳ್ಳುವುದು, ತಾವೂ ಸಹ ಅರ್ಥ ಹೇಳುತ್ತೀರಲ್ಲವೇ? ಹೋಳಿ( ಹಿಂದಿಯಲ್ಲಿ ಹೋಲಿ ಎಂಬ ಪದದ ಅರ್ಥ ಆಗಿ ಹೋಯಿತು) ಎಂದರೆ ಯಾವ ಮಾತು ಆಗಿ ಹೋಯಿತೋ, ಕಳೆದು ಹೋಯಿತೋ ಅದನ್ನು ಪೂರ್ಣ ಸಮಾಪ್ತಿ ಮಾಡಿಕೊಳ್ಳುವುದು, ಕಳೆದದ್ದನ್ನು ಕಳೆದು ಹೋಯಿತು ಎಂದು ತಿಳಿದು ಮುಂದೆ ಹೋಗುವುದು, ಹೋಳಿಯ ಆಚರಣೆ ಎಂದರೆ ಹೋಳಿಯ ಅರ್ಥವನ್ನು ಜೀವನದಲ್ಲಿ ತರುವುದು. ಪ್ರತಿದಿನವೂ ಪುರುಷಾರ್ಥವನ್ನು ಬದಲಾಯಿಸಲು ಯಾವುದೇ ಮಾತು ಬಹಳ ಹಳೆಯ ಮತ್ತು ಯಾವುದೋ ಜನ್ಮದ ಮಾತಿನಂತೆ ಅನುಭವವಾಗಬೇಕು. ಈ ರೀತಿ ಎಂದೋ ಕಳೆದು ಹೋದಂತೆ ಅನುಭವಾಗಬೇಕು ಈ ಸ್ಥಿತಿಯಾದಾಗ ಪುರುಷಾರ್ಥದ ಗತಿ ತೀವ್ರವಾಗುವುದು. ಪುರುಷಾರ್ಥದ ಗತಿಯನ್ನು ಸಡಿಲಗೊಳಿಸುವ ಮುಖ್ಯ ಮಾತೇನೆಂದರೆ ಕಳೆದು ಹೋದದ್ದನ್ನು ಚಿಂತನೆ ಮಾಡುವುದಾಗಿದೆ. ತಮ್ಮ ಅಥವಾ ಬೇರೆಯವರ ಕಳೆದು ಹೋದ ಮಾತುಗಳನ್ನು ಚಿಂತನೆಯಲ್ಲಿ ತರುವುದು ಮತ್ತು ಮನಸ್ಸಿನಲ್ಲಿ ಇಟ್ಟುಕೊಳ್ಳುವುದು, ಒಂದಾಗಿದೆ ಮನದಲ್ಲಿಟ್ಟುಕೊಳ್ಳುವುದು ಮತ್ತೊಂದು ಚಿಂತನೆ ಮಾಡುವುದು. ಚಿತ್ತದಲ್ಲಿರದೇ ಇರುವುದು ಚಿಂತನೆಯಲ್ಲಿ ಬರಬಾರದು. ಮೂರನೆಯದಾಗಿದೆ ವರ್ಣನೆ ಮಾಡುವುದು. ಆದ್ದರಿಂದ ಈ ದಿನ ಬಾಪ್ ದಾದಾ ಹೋಳಿ ಆಚರಣೆ ಮಾಡಲು ಬಂದಿದ್ದಾರೆ. ಹೋಳಿ ಆಚರಿಸಲು ಕರೆಸಿದ್ದೀರಲ್ಲವೇ? ಹಾಗಾದರೆ ಈ ಬಣ್ಣವನ್ನು ಪಕ್ಕಾ ಹಚ್ಚಿಕೊಳ್ಳುವುದೇ ಹೋಳಿ ಆಚರಿಸುವುದಾಗಿದೆ. ಹೋಳಿಯ ದಿನ ಬಣ್ಣವನ್ನು ಹಚ್ಚುತ್ತಾರೆ ಮತ್ತು ಏನನ್ನು ಮಾಡುತ್ತಾರೆ? ಒಂದು ದಿನ ಮೊದಲು ಸುಡುತ್ತಾರೆ, ಮರುದಿನ ಆಚರಿಸುತ್ತಾರೆ. ಸುಟ್ಟ ಮೇಲೆ ಆಚರಿಸುವುದು ಮತ್ತು ಆಚರಿಸುವಾಗ ಸಿಹಿ ತಿನ್ನುತ್ತಾರೆ. ತಾವು ಯಾವ ಸಿಹಿಯನ್ನು ಇಲ್ಲಿ ತಿನ್ನುವಿರಿ. ಬಣ್ಣವಂತೂ ಯಾವುದೆಂದು ತಿಳಿಸಲಾಯಿತು. ಈಗ ಸಿಹಿಯನ್ನು ಏಕೆ ತಿನ್ನುವರು?.

ಯಾವಾಗ ಈ ಬಣ್ಣ ಹಚ್ಚಲಾಗುತ್ತದೆಯೋ ಆಗ ಮಧುರತೆಯ ಗುಣ ಸ್ವತಃ ಬರುತ್ತದೆ. ತಮ್ಮ ಅಥವಾ ಬೇರೆಯವರ ಕಳೆದು ಹೋದದ್ದನ್ನು ನೋಡದೇ ಇದ್ದಾಗ ಸರಳಚಿತ್ತರಾಗುವಿರಿ ಮತ್ತು ಯಾರು ಸರಳ ಚಿತ್ತರಾಗಿರುವರೋ ಅವರ ಯಾವ ಗುಣ ಪ್ರತ್ಯಕ್ಷ ರೂಪದಲ್ಲಿ ಕಂಡು ಬರುತ್ತದೆ? ಮಧುರತೆ, ಅವರ ಕಣ್ಣುಗಳಿಂದ, ಮುಖದಿಂದ, ನಡತೆಯಿಂದ ಮಧುರತೆ ಪ್ರತ್ಯಕ್ಷ ರೂಪದಲ್ಲಿ ಕಂಡುಬರುತ್ತದೆ. ಈ ಬಣ್ಣದಲ್ಲಿ ಮಧುರತೆ ಬರುವುದರಿಂದ ಸಿಹಿ ಸಿಗುವ ನಿಯಮವಿದೆ. ಹೋಳಿಯ ದಿನ ಏನು ಮಾಡುತ್ತಾರೆ? (ಮಂಗಳ ಮಿಲನ) ಮಂಗಳ ಮಿಲನದ ಅರ್ಥ ಏನಾಯಿತು? ಇಲ್ಲಿ ಮಂಗಳ ಮಿಲನವನ್ನು ಯಾವಾಗ ಮಾಡುವಿರಿ? ಮಧುರತೆ ಬಂದ ಮೇಲೆ.

ಮಂಗಳ ಮಿಲನ ಏನಾಗಿದೆ? ಸಂಸ್ಕಾರಗಳ ಮಿಲನವಾಗಿದೆ. ಭಿನ್ನಭಿನ್ನ ಸಂಸ್ಕಾರಗಳ ಕಾರಣದಿಂದಲೇ ಒಬ್ಬರಿಂದ ಇನ್ನೊಬ್ಬರು ದೂರವಾಗುತ್ತಾರೆ. ಹಾಗಾದರೆ ಈಗ ಈ ಬಣ್ಣ ಹತ್ತುವುದು, ಮಧುರತೆ ಬರುವುದು, ಆಗ ಯಾವ ಮಿಲನವಾಗುತ್ತದೆ? ತಾವು ಸಮ್ಮೇಳನವನ್ನು ಮಾಡಿ ಬಂದಿರುವಿರಲ್ಲವೆ? ಬಾಪ್ ದಾದಾರ ಈ ಭಟ್ಟಿ ಸಂಸ್ಕಾರಗಳ ಮಿಲನಕ್ಕಾಗಿದೆ. ಸಂಸ್ಕಾರಗಳ ಮಿಲನವಾದಾಗ ಈ ಸಮ್ಮೇಳನದ ಪ್ರತ್ಯಕ್ಷತೆ ಕಂಡುಬರುವುದು. ತಾವು ಸಮ್ಮೇಳನವನ್ನು ಮಾಡಿದಿರಿ ಮತ್ತು ಬಾಪ್ ದಾದಾ ಸಂಸ್ಕಾರಗಳ ಮಿಲನ ಮಾಡುತ್ತಿದ್ದಾರೆ. ಆದ್ದರಿಂದ ಈ ಮಿಲನದ ಸ್ಮೃತಿಚಿಹ್ನೆ ಈ ಮಂಗಳ ಮಿಲನವಾಗಿದೆ. ಮಕ್ಕಳೊಂದಿಗೆ ಬಾಪ್ ದಾದಾರ ಮಿಲನವಂತೂ ಇದೆ, ಆದರೆ ಪರಸ್ಪರರಲ್ಲಿ ಸಂಸ್ಕಾರಗಳ ಮಿಲನ ಅತಿ ಉನ್ನತವಾದದ್ದಾಗಿದೆ. ಈ ಸಂಸ್ಕಾರಗಳ ಮಿಲನವಾದಾಗ ಜೈ ಜೈಕಾರವಾಗುವುದು.  ಎಲ್ಲರಿಗೂ ಸಿದ್ಧಿಯನ್ನು ಕೊಡಿಸುವವರು ಎಂದು ದೇವಿಯರ ಗಾಯನವಿದೆಯಲ್ಲವೇ? ಯಾರಿಗಾದರೂ ರಿದ್ಧಿ-ಸಿದ್ಧಿ ಪಾಪ್ತಿ ಮಾಡಿಕೊಳ್ಳಬೇಕಾದರೆ ಯಾರಿಂದ ಪಡೆದುಕೊಳ್ಳುತ್ತಾರೆ? ರಿದ್ಧಿ-ಸಿದ್ಧಿ ಪ್ರಾಪ್ತಿ ಮಾಡಿಸುವವರು ಯಾರಾಗಿದ್ದಾರೆ? (ದೇವಿಯರು), ಪುರುಷಾರ್ಥದ ವಿಧಿ ಸಂಪೂರ್ಣವಾದಾಗ ಈ ಸಿದ್ಧಿ ಪ್ರಾಪ್ತಿಯಾಗುತ್ತದೆ. ಎಂದಿಗೂ ಸಿದ್ಧಿಯನ್ನು ಪ್ರಾಪ್ತಿಮಾಡಿಕೊಳ್ಳಲು ಬಾಪ್ ದಾದಾರ ಬಳಿಗೆ ಬರುವುದಿಲ್ಲ. ದೇವಿಯರ ಬಳಿಗೆ ಹೋಗುತ್ತಾರೆ.

ದೇವಿಯರು ಸ್ವಯಂ ಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ ಬೇರೆಯವರಿಗೆ ರಿದ್ಧಿ-ಸಿದ್ಧಿಯನ್ನು ಕೊಡುವರು. ಸಂಸ್ಕಾರಗಳ ಮಿಲನವಾದಾಗ ನಿಮ್ಮ ಪುರುಷಾರ್ಥದ ಸಿದ್ಧಿಯಾಗುವುದು. ಎಲ್ಲರಿಗಿಂತ ದೊಡ್ಡ ಭಕ್ತರ ಕ್ಯೂ ಎಲ್ಲಿರುತ್ತದೆ? (ದೇವಿಯರ ಮುಂದೆ) ಹನುಮಂತನ ಮಂದಿರದಲ್ಲಿ, ದೇವಿಯರ ಮಂದಿರದಲ್ಲಿ ಹೆಚ್ಚು ಸೇರುವುದರಿಂದ ಏನು ಸಿದ್ಧವಾಗುತ್ತದೆ? ಸಾಕಾರ ರೂಪದಲ್ಲಿಯೂ ಯಾರು ಕ್ಯೂ ನೋಡುವರು? ಪ್ರತ್ಯಕ್ಷತೆಯ ನಂತರ ನಿಲ್ಲುವ ಸಾಲನ್ನು (ಕ್ಯೂ) ಯಾರು ನೋಡುವರು? ಮಕ್ಕಳೇ ನೋಡುವರು. ಬಾಪ್ ದಾದಾ ಗುಪ್ತವಾಗಿದ್ದಾರೆ, ಪ್ರತ್ಯಕ್ಷ ರೂಪದಲ್ಲಿ ಮಕ್ಕಳೇ ನೋಡುವರು. ಅದರ ಸ್ಮೃತಿಚಿಹ್ನೆ ಪ್ರತ್ಯಕ್ಷ ರೂಪದಲ್ಲಿಯೂ ಭಕ್ತರ ಅತಿ ದೊಡ್ಡ ಕ್ಯೂ ಮಕ್ಕಳಮುಂದೆಯೇ ಇರುವುದು. ಆದರೆ ಈ ಕ್ಯೂ ಯಾವಾಗ ಹತ್ತುವುದು? ಸಂಸ್ಕಾರಗಳ ಮಿಲನವಾಗುತ್ತಿಲ್ಲ ಎಂಬ ಒಂದು ಶಬ್ದವನ್ನು ತೆಗೆದು ಹಾಕಿದಾಗ ಕ್ಯೂ ಹತ್ತುವುದು. ಈ ಭಟ್ಟಿಯಲ್ಲಿ ಇನ್ನೂ ಹೆಚ್ಚು ಅಧ್ಯಯನ ಮಾಡಬೇಕಾಗಿಲ್ಲ ಆದರೆ ಅಂತಿಮ ಸಿದ್ಧಿಯ ಸ್ವರೂಪವಾಗಿ ತೋರಿಸಬೇಕು. ಸಂಸ್ಕಾರಗಳನ್ನು ಮಿಲನ ಮಾಡಲಿಕ್ಕಾಗಿ ಈ ಸಂಘಟನೆಯಿದೆ. ಯಾವುದೇ ವಸ್ತುವನ್ನು ಕೂಡಿಸುವಾಗ ಏನು ಮಾಡಲಾಗುತ್ತದೆ? ಯಾವುದೇ ಎರಡು ವಸ್ತುಗಳನ್ನು ಸಮೀಪ ತರಬೇಕಾದಾಗ ಕೂಡಿಸಬೇಕಾಗಿ ಬರುತ್ತದೆ ಅದೇ ರೀತಿ, ಸಂಸ್ಕಾರಗಳ ಮಿಲನ ಮಾಡಲು ಹೃದಯಗಳ ಮಿಲನವಾಗಬೇಕು. ಹೃದಯಗಳ ಮಿಲನದಿಂದ ಸಂಸ್ಕಾರಗಳ ಮಿಲನವಾಗುವುದು. ಹಾಗಾದರೆ ಸಂಸ್ಕಾರಗಳನ್ನು ಕೂಡಿಸಲು ಮರೆಯುವುದು, ಅಳಿಸಿಹಾಕುವುದು ಮತ್ತು ಅಳವಡಿಸಿಕೊಳ್ಳುವುದು ಈ ಮೂರು ಮಾತುಗಳನ್ನು ಮಾಡಬೇಕು. ಕೆಲವನ್ನು ಅಳಿಸಿ ಹಾಕಬೇಕು, ಕೆಲವನ್ನು ಮರೆಯಬೇಕು, ಕೆಲವನ್ನು ಅಳವಡಿಸಿಕೊಳ್ಳಬೇಕು, ಆಗಲೇ ಈ ಸಂಸ್ಕಾರಗಳ ಮಿಲನವಾಗುವುದು. ಇದೇ ಅಂತಿಮ ಸಿದ್ಧಿಯ ಸ್ವರೂಪವಾಗುವುದಾಗಿದೆ. ಈಗ ಅಂತಿಮ ಸ್ಥಿತಿಯನ್ನು ಸಮೀಪ ತರಬೇಕು. ಪರಸ್ಪರರ ಮಾತುಗಳನ್ನು ಸ್ವೀಕಾರ ಮಾಡುವುದು ಮತ್ತು ಸತ್ಕಾರ ಕೊಡುವುದು ಬಂದರೆ ಸಂಪೂರ್ಣತೆ ಮತ್ತು ಸಫಲತೆ ಎರಡೂ ಸಮೀಪ ಬರುವವು. ಕೇವಲ ಈ ಎರಡು ಮಾತುಗಳ ಬಗೆಗೆ ಗಮನ ಕೊಡಬೇಕು, ಎರಡೂ ಮಾತುಗಳನ್ನು ಸಮೀಪ ತರಬೇಕು. ಒಬ್ಬರು ಇನ್ನೊಬ್ಬರಿಗೆ ಸತ್ಕಾರ ಮಾಡುವುದೇ ಭವಿಷ್ಯದ ಅಧಿಕಾರವನ್ನು ಪಡೆಯುವುದಾಗಿದೆ. ಇದು ಯಾರ ಭಟ್ಟಿಯಾಗಿದೆ ಗೊತ್ತಿದೆಯಾ? ಈ ಭಟ್ಟಿಯ ಹೆಸರೇನು? ತಮಗೆ ತಿಲಕದ ಬದಲು ಬೇರೆ ವಸ್ತುವನ್ನು ಕೊಡುವೆವು. ಬೇರೆಯವರಿಗೆ ತಿಲಕ ಹಚ್ಚಲಾಯಿತು. ಈ ಭಟ್ಟಿಯಲ್ಲಿ ಸಿಂಧೂರ (ಬೈತಲೆಯ ಕುಂಕುಮ) ಹಚ್ಚಬೇಕಾಗಿದೆ. ತಿಲಕ ಚಿಕ್ಕದಾಗಿರುತ್ತದೆ. ಸಿಂಧೂರ ದೊಡ್ಡದಾಗಿರುತ್ತದೆ. ಹಿರಿತನದ ಚಿಹ್ನೆಯಾಗಿದೆ ಸಿಂಧೂರ, ತಿಲಕ ಚಿಕ್ಕವರಿಗೂ ಹಚ್ಚುತ್ತಾರೆ ಆದರೆ ಸಿಂಧೂರವನ್ನು ದೊಡ್ಡವರೇ ಹಚ್ಚಿಕೊಳ್ಳುತ್ತಾರೆ. ಯಾವಾಗ ಜವಾಬ್ದಾರಿಯನ್ನು ತಮ್ಮ ಮೇಲಿಟ್ಟುಕೊಳ್ಳುವ ಸಾಹಸವಿರುವುದೋ ಆಗ ಸಿಂಧೂರವನ್ನು ಧಾರಣೆ ಮಾಡುವರು, ಸಿಂಧೂರ ಚೆನ್ನಾಗಿದೆಯೋ ಅಥವಾ ತಿಲಕವೋ? ತಾವೆಲ್ಲರೂ

ಸರ್ವರ ಶುಭ ಚಿಂತಕರಾಗಿದ್ದೀರಿ, ಸೇವಾಧಾರಿ ಎಂದರೆ ಶುಭ ಚಿಂತಕ, ಶುಭ ಚಿಂತಕರ ಚಿಹ್ನೆಯಾಗಿದೆ ಸಿಂಧೂರ ಮತ್ತು ಹೆಸರಾಗಿದೆ ಶುಭಚಿಂತಕ ಗುಂಪು.

ತಾವು ಶುಭ ಚಿಂತಕರಾಗುವುದರಿಂದ ಎಲ್ಲರ ಚಿಂತೆಗಳು ದೂರವಾಗುವವು. ತಾವು ಎಲ್ಲರ ಚಿಂತೆಗಳನ್ನು ದೂರ ಮಾಡುವ ಶುಭಚಿಂತಕರಾಗಿದ್ದೀರಿ ಮತ್ತು ಸ್ಲೋಗನ್ ಏನಾಗಿದೆ? ಆತ್ಮನೇ ಪರಮಾತ್ಮ ಎಂದು ಆ ಜನ ಹೇಳುವಂತೆ ತಮ್ಮ ಸ್ಲೋಗನ್ ಯಾವುದು? **ಬಾಲಕರೇ ಮಾಲೀಕರು** . ಈ ಸ್ಲೋಗನ್ ವಿಶೇಷ ಈ ಗುಂಪಿನದು, ಈಗ ಹೆಸರು, ಸ್ಲೋಗನ್, ಕೆಲಸ ಸಿಕ್ಕಿತು ಮತ್ತು ಈ ಭಟ್ಟಿಯಲ್ಲಿ ಏನು ಮಾಡಬೇಕು? ಸಂಸ್ಕಾರ ಮಿಲನ ಹೇಗೆ ಮಾಡುವುದು ಎಂಬ ಭಾಷಣ ಮಾಡಬೇಕು. ಈ ಭಟ್ಟಿಯಲ್ಲಿ ಅನೇಕರ ಸಂಸ್ಕಾರಗಳನ್ನು ತಮ್ಮ ಸಮಾನ ಮಾಡಿಕೊಳ್ಳುವ ಅದ್ಭುತವನ್ನು ಮಾಡಬೇಕು. ತಮ್ಮ ಸಂಸ್ಕಾರಗಳಲ್ಲ, ಸಂಪೂರ್ಣತೆಯ ಸಂಸ್ಕಾರಗಳು. ಒಬ್ಬರು ಅನೇಕರನ್ನು ಸಂಪೂರ್ಣ ಸಂಸ್ಕಾರದವರಾಗಿ ಮಾಡಿದಾಗ ಏನಾಗುವುದು? ಸಮಾಪ್ತಿ, ಸಮಾಪ್ತಿ ಮಾಡುವಂತಹ ಗುಂಪು, ಮತ್ತು ಸ್ಥಾಪನೆ ಮಾಡುವ ಗುಂಪೂ ಇದೇ ಆಗಿದೆ. ಯಾವುದರ ಸಮಾಪ್ತಿ ಮಾಡಬೇಕು? ಯಾವುದರ ಪಾಲನೆ ಮಾಡಬೇಕು ಮತ್ತು ಸ್ಥಾಪನೆ ಏನು ಮಾಡಬೇಕು? ಈ ಭಟ್ಟಿಯಲ್ಲಿ ಈ ಮೂರೂ ವಿಷಯಗಳನ್ನು ಸ್ಪಷ್ಟ ಮಾಡಬೇಕು. ಆದ್ದರಿಂದ ತ್ರಿಮೂರ್ತಿಯ ಕುಂಕುಮ ಹಚ್ಚುತ್ತಿದ್ದೇವೆ. ಸ್ಥಾಪನೆ, ಪಾಲನೆ, ಸಮಾಪ್ತಿ ಅರ್ಥಾತ್ ವಿನಾಶ, ವರ್ಣನೆಗೆ ಸೀಮಿತವಾಗದೇ ಸ್ಪಷ್ಟ ಮತ್ತು ಸರಳ ರೀತಿಯಲ್ಲಿ ಏನನ್ನು ಮಾಡಬೇಕೆಂದು ಪ್ರಯೋಗದಲ್ಲಿ ಬರುವಂತಹ ಮಾತುಗಳನ್ನು ಆಡಬೇಕು. ಆದರೆ ಬಿಂದು ರೂಪವಾಗಿಯೇ ಈ ಮೂರು ಕರ್ತವ್ಯಗಳನ್ನು ಸಫಲ ಮಾಡಬಹುದು. ಆದ್ದರಿಂದ ತಮ್ಮ ಈ ಕರ್ತವ್ಯದ ಸ್ಮೃತಿಚಿಹ್ನೆಯಾಗಿ ಸಿಂಧೂರವನ್ನು ಕೊಡಲಾಗಿದೆ. ಸ್ಮೃತಿ, ಸ್ಥಿತಿ ಮತ್ತು ಕರ್ತವ್ಯ ಈ ಮೂರೂ ಸ್ಮೃತಿಚಿಹ್ನೆಯಲ್ಲಿ ಸಮಾವೇಶಗೊಂಡಿವೆ. ಇದಾಗಿದೆ ಸಮಾರಂಭ, ವಿಶೇಷ ಗುಂಪಿನ ಮಾತುಗಳು ವಿಶೇಷವಾಗಿರುತ್ತವೆ. ತಾವೆಲ್ಲರೂ ಹೋಳಿ ಆಚರಣೆ ಮಾಡಲು ಬಂದಿರುವಿರೋ ಅಥವಾ ಸಮಾರಂಭವನ್ನು ನೋಡಲು ಬಂದಿರುವಿರೋ? ಇಂತಹ ಶ್ರೇಷ್ಠ ಆತ್ಮರ ಸಮೀಪ ಈ ಗುಂಪಿನ ಬರುವ ನಾಟಕದಲ್ಲಿಯ ಈ ಪಾತ್ರವನ್ನು ಸೌಭಾಗ್ಯವೆಂದು ತಿಳಿಯಿರಿ, ಸಮಾರಂಭವನ್ನು ನೋಡುವುದು ಎಂದರೆ ತಮ್ಮನ್ನು ಈ ರೀತಿ ಶ್ರೇಷ್ಠ ಮಾಡಿಕೊಳ್ಳುವುದು. ಈ ಗುಂಪಿನವರು ಹೇಗೆ ಸಾಕಾರದಲ್ಲಿ ಸಮೀಪ ಬಂದಿರುವಿರೋ, ಅದೇ ರೀತಿ ಸಂಬಂಧದಲ್ಲಿಯೂ ಸಮೀಪವಾಗಿರುವ ಹಾಗೆ ತಮ್ಮನ್ನು ತಯಾರು ಮಾಡಿಕೊಳ್ಳಿ. ನೋಡುವವರು ಕಡಿಮೆಯೇನಿಲ್ಲ. ನೋಡುವ ಆತ್ಮರು ಸಹ ಶ್ರೇಷ್ಠ ಮತ್ತು ಸಮೀಪವಿದ್ದಾರೆ. ಬಾಪ್ ದಾದಾರ ಮನಪ್ರಿಯ ರತ್ನಗಳಾಗಿದ್ದಾರೆ. ಮೊದಲು ಯಾರು ಬರುವರು? ಬಾಪ್ ದಾದಾ ಎಲ್ಲರನ್ನೂ ಒಂದೇ ಗತಿಯಲ್ಲಿ ನೋಡುತ್ತಿದ್ದಾರೆ. ಆದ್ದರಿಂದ ಒಂದು, ಎರಡು ಎಂದು ಹೇಳಲಾಗುತ್ತಿಲ್ಲ. ಈ ಸಮಯ ಎಲ್ಲರೂ ಒಬ್ಬನ ನೆನಪಿನಲ್ಲಿ ಇದ್ದುದರಿಂದ ಎಲ್ಲರೂ ಮೊದಲನೆಯ ನಂಬರ್ ಆಗಿದ್ದೀರಿ. ತಾವು ಯಾವಾಗ ಉತ್ಸಾಹ ಮತ್ತು ವೇಗದಿಂದ ಈ ಗುಂಪಿಗೆ ಸಮೀಪ ಬಂದಾಗ ತಮ್ಮ ಸಮಾರಂಭವಾಗುವುದು. (ನಂತರ ಪ್ರತಿಯೊಬ್ಬ ಹಿರಿಯ ಸಹೋದರಿಗೆ ಬಾಪ್ ದಾದಾ ಸಿಂಧೂರ ಹಚ್ಚಿ ಆತ್ಮಿಕ ಸಂಭಾಷಣೆ ಮಾಡಿದರು)

(ದೀದಿ) ಬಾಲಕ ಮಾಲಿಕನಾಗಿರುವುದರಿಂದ ಸಮಾನತೆಯಲ್ಲಿ ಕುಳ್ಳಿರಿಸಿಕೊಂಡಿದೆ. (ಪೀಠದ/ಸಿಂಹಾಸನದ ಮೇಲೆ), ವ್ಯಕ್ತ ರೂಪದಲ್ಲಿ ಈ ಸಮಾರಂಭ ನಡೆಯುತ್ತದೆಯೇ? ಬಾಲಕರನ್ನು ಮಾಲಿಕರನ್ನಾಗಿ ಮಾಡಿದರು ಈಗ ಸಿಂಹಾಸನಾಧಿಕಾರಿಯನ್ನಾಗಿ ಮಾಡುತ್ತಾರೆ. ಸಾಕಾರದಲ್ಲಿ ಹೃದಯ ಸಿಂಹಾಸನಾಧಿಕಾರಿಯಾಗಿದ್ದೀರಿ, ಈಗ ಸೇವೆಯ ಸಿಂಹಾಸನ ಮತ್ತು ಭವಿಷ್ಯದಲ್ಲಿ ರಾಜ್ಯ ಸಿಂಹಾಸನ. ಸಂಗಮದಲ್ಲಿ ಸಿಂಹಾಸನಾರೂಢರು ಈಗಲೇ ಆಗುತ್ತೀರಿ. ನಾಟಕದಲ್ಲಿ ಯಾವ ಪಾತ್ರ ಪೂರ್ವ ನಿಯೋಜಿತವಾಗಿದೆಯೋ ಅದು ಎಷ್ಟು ರಹಸ್ಯಯುಕ್ತವಾಗಿದೆ ಎಂಬುದನ್ನು ದಿನದಿನಕ್ಕೆ ಸ್ಪಷ್ಟವಾಗಿ ತಿಳಿಯುವಿರಿ. ಸ್ನೇಹಕ್ಕಂತಲೂ ಕರ್ತವ್ಯ ಕೆಲವೊಮ್ಮೆ ಬಂಧನದಲ್ಲಿ ಬಂಧಿಸುತ್ತದೆ. ಸ್ನೇಹದ ಬಂಧನವಿರುವಂತೆ ಕರ್ತವ್ಯದ ಬಂಧನವಿದೆ. ಇದಾಗಿದೆ ಕರ್ತವ್ಯದ ಬಂಧನ. ಕರ್ತವ್ಯದ ಬಂಧನದಲ್ಲಿ ಅವ್ಯಕ್ತ ರೂಪದಲ್ಲಿರುವಿರಿ. ಸ್ನೇಹದ ಬಂಧನದಲ್ಲಿ ಸಾಕಾರ ರೂಪದಲ್ಲಿದ್ದಿರಿ.

(ಕುಮಾರಕಾ ದಾದಿ) ಅವ್ಯಕ್ತ ರೂಪದಿಂದ ಸಿಂಹಾಸನಾರೂಢರನ್ನಾಗಿ ಮಾಡುತ್ತಾರೆ ಎಂದು ಸ್ವಪ್ನದಲ್ಲಿ ಎಂದಾದರೂ ಯೋಚಿಸಿದ್ದಿರಾ? ಯಾರು ಸಿಂಹಾಸನಾರೂಢರಾಗುತ್ತಾರೆ? ಯಾರು ಸದಾ ನಶೆಯಲ್ಲಿ ಇರುವರು ಮತ್ತು ಗುರಿ ನಿಖರವಾಗಿ ಇರುವುದೋ ಅವರು, ನಶೆ ಮತ್ತು ಗುರಿ, ಯೋಗ ಮತ್ತು ಜ್ಞಾನ. ಇಂತಹ ಮಕ್ಕಳೇ ಮೂರು ಸಿಂಹಾಸನಗಳಿಗೆ ಅಧಿಕಾರಿಗಳಾಗುತ್ತಾರೆ. ತ್ರಿಮೂರ್ತಿ ಸಿಂಹಾಸನವೂ ಇದೆ. ಒಂದು ಸಿಂಹಾಸನಾಧೀಕಾರಿಯಾದರೆ ಮೂರು ಸಿಂಹಾಸನಾಧೀಕಾರಿಗಳಾಗುವಿರಿ. ತಂದೆ ಸಿಂಹಾಸನಾಧೀಕಾರಿ ಮಕ್ಕಳನ್ನು ನೋಡುತ್ತಾರೆ. ಎಂದಾಗ ಏನಾಗುತ್ತದೆ? ಇಂತಹ ಯೋಗ್ಯ ಮಕ್ಕಳಿದ್ದಾರೆ ಎಂಬ ನಶೆ ಬಾಪ್ ದಾದಾರಿಗೂ ಉಂಟಾಗುವುದು.

(ಜಾನಕಿ ದಾದಿ) ಇಲ್ಲಿಯವರೆಗೆ ವಾಣಿಮೂರ್ತಿ ನಂತರ ಸಾಕ್ಷಾತ್ಕಾರಮೂರ್ತಿ ಆಗುವಿರಿ. ಈಗ ವಾಣಿಯಿಂದ ಬೇರೆಯವರಿಗೆ ಸಾಕ್ಷಾತ್ಕಾರವಾಗುತ್ತದೆ. ಆದರೆ ನಂತರ ಶಾಂತಿಯಿಂದ ಸಾಕ್ಷಾತ್ಕಾರ ಆಗುವುದು. ಆಗ ಎಲ್ಲರ ಮುಖದಿಂದ ಏನು ಬರುವುದು? ಎಲ್ಲರೂ ಪರಮಾತ್ಮನ ರೂಪವೆಂಬ ಗಾಯನವೇನಿದೆಯೋ, ಸಂಗಮದಲ್ಲಿಯೇ ಪ್ರಾಕ್ಟಿಕಲ್ ಆಗುತ್ತದೆ. ಭಕ್ತಿಮಾರ್ಗದಲ್ಲಿ ಏನೆಲ್ಲಾ ಮಾತುಗಳನ್ನು ಹೇಳಿರುವರೋ ಅವುಗಳಲ್ಲಿ ಸಂಗಮದ ಮಾತುಗಳನ್ನು ಮಿಶ್ರಣ ಮಾಡಿದ್ದಾರೆ. ಎಲ್ಲರಲ್ಲಿಯೂ ಸಾಕ್ಷಾತ್ ಬಾಪ್ ದಾದಾನ ಮೂರ್ತಿ ಅನುಭವಕ್ಕೆ ಬರುವ ಸ್ಥಿತಿ ಅಂತ್ಯದಲ್ಲಿ ನಿಮ್ಮದಾಗುವುದು. ಇವರು ಸಾಕ್ಷಾತ್ ಬಾಪ್ ದಾದಾರ ಮೂರ್ತಿ ಎಂದು ಎಲ್ಲರ ಮುಖದಿಂದ ಕೇಳಿ ಬರುವುದು, ಸಾಕ್ಷಾತ್ ರೂಪವಾಗುವುದರಿಂದ ಸಾಕ್ಷಾತ್ಕಾರವಾಗುವುದು. ಎಲ್ಲರಲ್ಲಿ ಸಾಕ್ಷಾತ್ ರೂಪವಾದ ಅಂತ್ಯದ ರೂಪವನ್ನು ನೋಡುತ್ತೀರೋ ಇದನ್ನು ಮಿಶ್ರಣ ಮಾಡಿ ಎಲ್ಲರೂ ಪರಮಾತ್ಮನ ರೂಪವೆಂದು ಹೇಳುತ್ತಾರೆ. ತಂದೆಯ ಸಮಾನತೆಯನ್ನು ಪರಮಾತ್ಮನ ರೂಪವೆಂದು ಹೇಳುತ್ತಾರೆ. ಈ ಎಲ್ಲಾ ಮಾತುಗಳು ಇಲ್ಲಿಂದಲೇ ಬಂದಿವೆ. ಆದ್ದರಿಂದ ಸಾಕ್ಷಾತ್ಕಾರ ಮೂರ್ತಿಯಾಗಲು ಸಾಕ್ಷಾತ್ ಬಾಪ್ ದಾದಾರ ಸಮಾನರಾಗಬೇಕು, ಈಗ ಯಾವ ಪರಿಶೀಲನೆ ಮಾಡಬೇಕು? ಸಮಾನತೆಯ ಪರಿಶೀಲನೆ ಮಾಡಬೇಕು. ಎಷ್ಟು ಸಮಾನತೆಯೋ ಅಷ್ಟು ಸ್ವಮಾನ ಸಿಗುವುದು. ಸ್ವಮಾನತೆಯಿಂದ ತಮ್ಮ ಸಮಾನತೆಯ ಮಟ್ಟ ತಿಳಿಯುವುದು. ಸಮಾನತೆ ಎಲ್ಲಿಯವರೆಗೆ ಬಂದಿದೆ ಮತ್ತು ಇನ್ನೂ ಎಷ್ಟು ಬರಬೇಕು ಎಂಬ ಪರಿಶೀಲನೆ ಮಾಡಬೇಕು ಮತ್ತು ಮಾಡಿಕೊಳ್ಳಬೇಕು. ಇದೂ ವಿಷಯವಾಗಿದೆ. ಯಾರಲ್ಲಿ ಎಷ್ಟು ಸಮಾನತೆಯನ್ನು ನೋಡುವಿರೋ ಅಷ್ಟು ಸಮೀಪ ಎಂದು ತಿಳಿಯಿರಿ, ಸಮೀಪ ರತ್ನದ ಗುರುತೇ ಸಮಾನತೆಯಾಗಿದೆ.

(ಚಂದ್ರಮಣಿ ದಾದಿ) - ತಾವು ಸೂರ್ಯಮಣಿಯಾಗಿದ್ದೀರೋ ಅಥವಾ ಚಂದ್ರಮಣಿಯೋ? ಚಂದ್ರಮಣಿಯ ನಿವಾಸ ಸ್ಥಾನ ಮತ್ತು ಸೂರ್ಯಮಣಿಯ ನಿವಾಸ ಸ್ಥಾನ ಎಲ್ಲಿದೆ? ತಾವು ಎಂತಹ ಮಣಿಯಾಗಿದ್ದೀರಿ? (ಎರಡೂ ಆಗಿದ್ದೇವೆ ಶಕ್ತಿ ರೂಪವೂ ಮತ್ತು ಶೀತಲ ರೂಪವೂ ಆಗಿದ್ದೇವೆ. ಆದ್ದರಿಂದ ಸೂರ್ಯಮಣಿ ಮತ್ತು ಚಂದ್ರಮಣಿ ಎರಡೂ ಆಗಿದ್ದೇನೆ ಎಂದು ಹೇಳುತ್ತಾರೆ. ಈಗ ಜ್ಞಾನ ಬಂದಿದೆ ಆದರೆ ಸ್ಥಿತಿಯಿಲ್ಲ ಅಲ್ಲವೇ? ಜ್ಞಾನದಿಂದ ಶಕ್ತಿ ಬಂದಿಲ್ಲ ಆದರೆ ಪ್ರಕಾಶ ಬಂದಿದೆ. ಪ್ರಕಾಶ ಮತ್ತು ಶಕ್ತಿ ಎರಡರಲ್ಲಿ ಏಕರಸವಾದಾಗ ನಂಬರ್ ಪ್ರಕಟವಾಗುತ್ತದೆ. ಈಗ ಬೇರೆಯವರಿಗೆ ಜ್ಞಾನದ ಪ್ರಕಾಶ ಕೊಡಬಹುದು, ಶಕ್ತಿ ಕೊಡಲಾರಿರಿ. ಆದ್ದರಿಂದ ಸಫಲತೆಯೂ ಅದೇ ಅನುಸಾರ ಇರುತ್ತದೆ. ಇವರ ಜ್ಞಾನವೇನು ಎಂದು ಎಲ್ಲರಿಗೂ ಪ್ರಕಾಶ ಎಂದರೆ ಬೆಳಕು ಬರುತ್ತಿದೆ, ಆದರೆ ಪ್ರಕರದ ಪ್ರಭಾವ ಕಡಿಮೆಯಿದೆ, ಅರ್ಧ ಕೆಲಸ ಇನ್ನೂ ಉಳಿದಿದೆ. ಶಕ್ತಿ ಕೊಡಲು ನಂಬರವನ್ ಇವರು ಆಗುವರು ಕೆಲವರದು ಪ್ರಕಾಶವನ್ನು ಕೊಡಲು ನಂಬರ್ ಮುಂದಿದೆ. ಕೆಲವರದು ಶಕ್ತಿಯನ್ನು ಕೊಡಲು ನಂಬರ್ ಮುಂದಿದೆ. ಕೆಲವರು ಎರಡನ್ನು ಸಮಾನವಾಗಿ ಕೊಡುತ್ತಿದ್ದಾರೆ. ಮೂರು ಗುಣಮಟ್ಟದವರು ಇದ್ದಾರೆ. (ಬಾಪದಾದ ಬೈತಲಮಣಿ ತೊಡಿಸುವಾಗ ಎಲ್ಲರೂ ಚಪ್ಪಾಳೆ ತಟ್ಟುತ್ತಿದ್ದರು. ಸತ್ಯಯುಗದಲ್ಲಿ ಶಹನಾಯಿ ಬಾರಿಸುವರು. ಈಗ ಚಪ್ಪಾಳೆ ತಟ್ಟುವರು.

(ನಿರ್ಮಲ ಶಾಂತಾ ದಾದಿ) - ತನುವಿನ ರೋಗದ ಮೇಲೆ ವಿಜಯ ಪ್ರಾಪ್ತಿ ಮಾಡಿಕೊಳ್ಳುತ್ತಿರುವಿರಿ, ಸಂಗಮದಲ್ಲಿ ಕಿರೀಟ, ತಿಲಕ, ಸಿಂಹಾಸನ ಮತ್ತು ಸಮಂಗಲಿಯ ಭಾಗ್ಯ ಎಲ್ಲವೂ ಸಿಗುತ್ತದೆ. ಒಂದೇ ಸಮಯದಲ್ಲಿ ಸರ್ವ ಪ್ರಾಪ್ತಿಗಳನ್ನು ಬಾಪ್ ದಾದಾ

ಮಾಡಿಸುತ್ತಾರೆ. ಒಂದು ಜನ್ಮದಲ್ಲಿ ಕೊಟ್ಟದ್ದು ಅನೇಕ ಜನ್ಮ ನಡೆಯುತ್ತದೆ. ಅದೇ ರೀತಿ ಅನೇಕ ಜನ್ಮಗಳ ಲೆಕ್ಕಾಚಾರ ಒಂದು ಜನ್ಮದಲ್ಲಿ ಚುಕ್ತಾ ಮಾಡಬೇಕು. ಈ ಒಂದು ಜನ್ಮದ್ದು ಅನೇಕ ಜನ್ಮ ನಡೆಯುತ್ತದೆ. ಅನೇಕ ಜನ್ಮಗಳದ್ದು ಒಂದು ಜನ್ಮದಲ್ಲಿ ಸಮಾಪ್ತಿಯಾಗುತ್ತದೆ ಆದ್ದರಿಂದ ಕೆಲವೊಮ್ಮೆ ಬಹಳ ಜೋರಾಗಿ ಬರುವುದು, ಬಾಪ್ ದಾದಾ ಈ ಯುದ್ಧ ನೋಡುತ್ತಿರುತ್ತಾರೆ. ತಾವೂ ಸಹ ತಮ್ಮ ಮತ್ತು ಅನ್ಯರದನ್ನು ನೋಡುತ್ತೀರಾ? ಸಾಕ್ಷಿಯಾಗಿ ನೋಡುವಾಗ ಈ ರೋಗ ಪರಿವರ್ತನೆಯಾಗಿ ಆಟದ ರೂಪದಲ್ಲಿ ಬರುತ್ತದೆ. ಬಾಪ್ ದಾದಾ ಸಾಕ್ಷಿಯಾಗಿ ನೋಡುತ್ತಿರುತ್ತಾರೆ ಮತ್ತು ಅವರ ಸಾಹಸವನ್ನು ನೋಡಿ ಹರ್ಷಿತರಾಗುತ್ತಾರೆ ಮತ್ತು ಜೊತೆಗೆ ಸಹಯೋಗಿಯೂ ಆಗುತ್ತಾರೆ. ದಣಿಯುವುದಿಲ್ಲವಷ್ಟೇ? (ಇಲ್ಲ) ದಣಿಯದೇ ಇರುವ ತಂದೆಯ ಮಕ್ಕಳು ದಣಿಯದಿರುವವರು ಮತ್ತು ಅವಿನಾಶಿ ಆಗಿದ್ದೀರಿ. ಈಗ ಏನು ಮಾಡಬೇಕೆಂದು ಗೊತ್ತಿದೆಯಾ? ಈಗ ಅಂತ್ಯದಲ್ಲಿ ಸಾಕ್ಷಾತ್ಕಾರ ಮೂರ್ತಿಯಾಗಬೇಕು. ಸಾಕ್ಷಿ ಸ್ಥಿತಿ ಎಷ್ಟು ಹೆಚ್ಚಿರುವುದೋ ಅಷ್ಟು ಸಾಕ್ಷಾತ್ಕಾರ ಮೂರ್ತಿಗಳಾಗುವಿರಿ ಎಂದು ತಿಳಿದುಕೊಳ್ಳಿ. ಈಗ ಅಂತಿಮ ಪುರುಷಾರ್ಥ ಇದೇ ಉಳಿದಿದೆ. ಸಾಕ್ಷಾತ್ಕಾರ ಮೂರ್ತಿಯಾಗಿ ಬಾಪ್ ದಾದಾರ ಸಾಕ್ಷಾತ್ಕಾರ ಮತ್ತು ತಮ್ಮ ಸಾಕ್ಷಾತ್ಕಾರ ಮಾಡಿಸಬೇಕು.

(ಶಾಂತಾಮಣಿ ದಾದಿ) ಶ್ರೇಷ್ಠತೆಯನ್ನು ತರಲು ಮುಖ್ಯ ಗುಣ ಯಾವುದು? ಎಷ್ಟು ಸ್ಪಷ್ಟತೆ ಇರುತ್ತದೆಯೋ ಅಷ್ಟು ಶ್ರೇಷ್ಠತೆ ಬರುತ್ತದೆ. ಸರಳ ಮತ್ತು ಶ್ರೇಷ್ಠರಾಗಿರುವವರು ಸ್ಪಷ್ಟವಾಗಿರುವರು. ಸ್ಪಷ್ಟತೆ ಶ್ರೇಷ್ಠತೆಗೆ ಸಮೀಪವಿದೆ ಮತ್ತು ಎಷ್ಟು ಸ್ಪಷ್ಟತೆಯಿರುವುದೋ ಅಷ್ಟು ಸಫಲತೆಯೂ ಇರುವುದು, ಸಫಲತೆ ಸಮೀಪತೆಯನ್ನು ತರುತ್ತದೆ. ಸಮೀಪ ರತ್ನಗಳ ಲಕ್ಷಣಗಳು ಯಾವುದರಿಂದ ಗೊತ್ತಾಗುತ್ತವೆ? (ಸಮಾನತೆಯಿಂದ), ಬಾಪ್ ದಾದಾರ ಸಂಸ್ಕಾರಗಳ ಸಮಾನತೆ ಸಮೀಪತೆಯ ಚಿಹ್ನೆಯಾಗಿದೆ. ಆದಿ ರತ್ನವಾಗಿದ್ದೀರಿ, ಆದಿ ರತ್ನವಾಗಿರುವವರು ಅನಾದಿ ಗಾಯನಾ ಯೋಗ್ಯವಾಗುತ್ತಾರೆ ಏಕೆಂದರೆ ಆದಿದೇವನ ಜೊತೆಗೆ ಸಹಯೋಗಿಗಳಾಗಿದ್ದಾರೆ. ಆದಿರತ್ನಗಳೇ ಸೃಷ್ಟಿಯ ಕರ್ತವ್ಯದ ಆಧಾರವಾಗಿದ್ದಾರೆ.

(ರತ್ನ ಮೋಹಿನಿ ದಾದಿ) ಸ್ನೇಹಿಯೋ ಅಥವಾ ಸಹಯೋಗಿಯೋ? (ಎರಡೂ), ಸ್ನೇಹಿ ಮತ್ತು ಸಹಯೋಗಿ ಎರಡೂ ಸ್ನೇಹಿಯಾಗಿರುವಿರೋ ಅಥವಾ ಸಹಯೋಗಿಯಾಗಿರುವಿರು ಎರಡು ಸಮಾನವಾಗಿವೆ, ಯಾರು ಎಷ್ಟು ಸ್ನೇಹಿಯೋ ಅಷ್ಟು ಸಹಯೋಗಿಯಾಗುತ್ತಾರೆ, ಅಷ್ಟೇ ಶಕ್ತಿರೂಪರೂ ಆಗಿರುತ್ತಾರೆ. ಸ್ನೇಹಿಯಾಗಿರುವವರು ಸಹಯೋಗ ಕೊಡದೇ ಇರಲಾರರು, ಸ್ನೇಹ, ಸಹಯೋಗ ಮತ್ತು ಶಕ್ತಿ ಮೂರರಲ್ಲಿ ಸಮಾನತೆ ಇರುತ್ತದೆಯೋ ಆಗ ಸಮಾಪ್ತಿಯಾಗುವುದು. ಈ ಸಮಯ ಡಬಲ್ ಕಿರೀಟಧಾರಿಗಳಾಗಿದ್ದೀರೋ ಅಥವಾ ಭವಿಷ್ಯದಲ್ಲಿ ಆಗುವಿರೋ? ಸಂಗಮದಲ್ಲಿ ಡಬಲ್ ಕಿರೀಟಧಾರಿಗಳಾಗಿದ್ದೀರಾ? ಯಾವ ಎರಡು ಕಿರೀಟಗಳು? ಒಂದು ಸ್ನೇಹದ್ದು ಮತ್ತೊಂದು ಸೇವೆಯದು, ಜವಾಬ್ದಾರಿಯ ಕಿರೀಟ ಸೇವೆಯ ಕಿರೀಟವಾಗಿದೆ. ಅದು ಸ್ಥೂಲ ಮತ್ತು ಇದು ಸೂಕ್ಷ್ಮ, ಸ್ನೇಹದ ಕಿರೀಟ ಸೂಕ್ಷ್ಮ, ಯಾರು ಇಲ್ಲಿ ಡಬಲ್ ಕಿರೀಟಧಾರಿಗಳು ಆಗುವರೋ ಅವರು ಅಲ್ಲಿಯೂ ಡಬಲ್ ಕಿರೀಟಧಾರಿ ಆಗುತ್ತಾರೆ. ಬಾಪ್ ದಾದಾ ಡಬಲ್ ಕಿರೀಟ ಕೊಡುತ್ತಾರೆ. ನಂಬರವಾರ್ ಕಿರೀಟಗಳು ಇರುತ್ತವೆಯಲ್ಲವೇ? ಇಲ್ಲಿಯೂ ನಂಬರವಾರ್ ಪುರುಷಾರ್ಥದನುಸಾರ ಕಿರೀಟಧಾರಿಗಳು ಕಂಡು ಬರುತ್ತಾರೆ.

(ಮನೋಹರ ದಾದಿ) - ಹೇಗೆ ಸಾಕಾರದಲ್ಲಿ ಅವ್ಯಕ್ತ ಕಾರ್ಯಕ್ರಮಗಳು ನಡೆಯುತ್ತಿದ್ದವೋ ಆಗ ಶೃಂಗರಿಸಿಕೊಂಡು ಕುಳಿತುಕೊಳ್ಳುತ್ತಿದ್ದಿರಿ. ಇಂದು ಅದೇ ಶೃಂಗರಿಸಿಕೊಂಡ ಚಿತ್ರಗಳನ್ನು ತೋರಿಸುತ್ತೀರಿ. ಪ್ರತಿಯೊಬ್ಬರದೂ ತನ್ನದೇ ಆದ ಸಮೀಪ ತರುವಂತಹ ವಿಶೇಷತೆಯಿದೆ. ತಮ್ಮ ವಿಶೇಷತೆ ಯಾವುದಾಗಿದೆ? ಸರ್ವರ ಸ್ನೇಹಿ ಮತ್ತು ಸರ್ವರ ಸಹಯೋಗಿಯಾಗುವುದು. ಯಾರು ಸರ್ವರ ಸ್ನೇಹಿಯಾಗಿರುತ್ತಾರೋ ಅವರಿಗೆ ಸರ್ವರಿಂದ ಸ್ನೇಹವೂ ಸಿಗುತ್ತದೆ. ಯಾರು ಎಲ್ಲರ ಸ್ನೇಹಿ ಆಗುತ್ತಾರೆ? ಯಾರು ಸರ್ವಸ್ವತ್ಯಾಗಿಯಾಗಿರುವರೋ ಅವರು ಸರ್ವರ ಸ್ನೇಹಿ ಮತ್ತು ಸಹಯೋಗಿಯಾಗುವರು. ಈ ರೀತಿ ಶ್ರೇಷ್ಠ ಸಂಕಲ್ಪದವರು ಶ್ರೇಷ್ಠ ಪದವಿಯ ಅಧಿಕಾರಿಗಳು ಆಗುತ್ತಾರೆ. ಸಂಕಲ್ಪದಲ್ಲಿಯೂ ಕೇವಲ ತಮ್ಮದಲ್ಲ, ಸರ್ವರ ಕಲ್ಯಾಣದ ಭಾವನೆಯಿರಲಿ. ಈ ರೀತಿಯಿಂದ

ಸರ್ವಪ್ರಾಪ್ತಿಗಳಿಗೆ ಅಧಿಕಾರಿಗಳಾಗುವಿರಿ. ಇಂತಹವರಿಗೆ ಬಾಪ್ ದಾದಾ ಮತ್ತು ಎಲ್ಲರಿಂದ ಸತ್ಕಾರ ಸಿಗುತ್ತದೆ. ಸತ್ಕಾರದ ಅಧಿಕಾರ ತೆಗೆದುಕೊಳ್ಳುವುದು ದೊಡ್ಡ ಮಾತಾಗಿದೆ.

ಅವ್ಯಕ್ತ ಮುರಳಿ 23-03-1970.

***ಗತಿಸಿ ಹೋದದ್ದು ಗತಿಸಿ ಹೋಯಿತು ಎಂದು ಭಾವಿಸುವುದೇ ಸತ್ಯ ಹೋಳಿಯ ಆಚರಣೆಯಾಗಿದೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು "ಗತಿಸಿ ಹೋದದ್ದೇನೋ ಗತಿಸಿ ಹೋಯಿತು" ಎಂದು ಭಾವಿಸಿ, ಮುಂದಕ್ಕೆ ಹೋಗಿ ಸತ್ಯವಾದ ಹೋಳಿಯನ್ನು ಆಚರಿಸಿಕೊಂಡಿದ್ದೇನೆ.

2. ನಾನು ಗತಿಸಿಹೋದ ವಿಷಯವನ್ನು ಹಳೆಯ ಜನ್ಮದ ವಿಷಯವೆಂದು ಭಾವಿಸಿ, ಪುರುಷಾರ್ಥದ ವೇಗವನ್ನು ತೀವ್ರ ಮಾಡಿಕೊಂಡಿದ್ದೇನೆ.

3. ನಾನು ಗತಿಸಿ ಹೋದ ವಿಷಯವನ್ನು ನೋಡದೇ ಸರಳಚಿತ್ತವಾಗಿ ತಯಾರಾಗಿ, ನನ್ನ ಕಣ್ಣುಗಳಿಂದ, ಮಾತುಗಳಿಂದ, ನಡತೆಯಿಂದ ಮಧುರತೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

4. ನಾನು ಎಲ್ಲಕ್ಕಿಂತಲೂ ಉನ್ನತೋನ್ನತವಾದ ಮಿಲನ - ಸಂಸ್ಕಾರಗಳ ಮಿಲನವನ್ನು ಮಾಡಿಕೊಂಡು ಜೈ ಜೈಕಾರಗಳನ್ನು ಪಡೆದಿದ್ದೇನೆ.

5. ನಾನು ಪುರುಷಾರ್ಥದ ವಿಧಿಯನ್ನು ಸಂಪೂರ್ಣ ಮಾಡಿ ರಿದ್ಧಿ-ಸಿದ್ಧಿಯನ್ನು ಕೊಡುವ ಸಿದ್ದಿ ಸ್ವರೂಪ.

6. ನಾನು ಗತಿಸಿಹೋದ ವಿಷಯವನ್ನು ಮರೆಯುವುದು, ಅಳಿಸಿ ಹಾಕುವುದು ಮತ್ತು ಅಳವಡಿಸಿಕೊಳ್ಳುವುದು ಈ ಮೂರರಿಂದ ಸಂಸ್ಕಾರಗಳ ಮಿಲನ ಮಾಡಿಕೊಂಡಿರುವ ಅಂತಿಮ ಸಿದ್ಧಿ ಸ್ವರೂಪ.

7. ನಾನು ಪ್ರತಿಯೊಬ್ಬರ ವಿಷಯಗಳನ್ನು ಸತ್ಕರಿಸಿ, ಸ್ವೀಕರಿಸಿರುವ ಸಂಪೂರ್ಣ ಮತ್ತು ಸಫಲತಾ ಸ್ವರೂಪ.

8. ನಾನು ಎಲ್ಲರ ಚಿಂತೆಗಳನ್ನು ಸಮಾಪ್ತಿ ಮಾಡಿರುವ ಶುಭ ಚಿಂತಕನು.

9. ನಾನು 'ಬಾಲಕನಿಂದ ಮಾಲೀಕ' (ಬಾಲಕ್ ಸೋ ಮಾಲಿಕ್) ಎಂಬ ಸ್ಲೋಗನ್ನಿನ ಸ್ಮೃತಿ ಸ್ವರೂಪ.

10. ನಾನು ಬಿಂದು ರೂಪವಾಗಿ ತ್ರಿಮೂರ್ತಿ ಕರ್ತವ್ಯವನ್ನು ಸಫಲ ಮಾಡಿದ್ದೇನೆ.

11. ನಾನು ನನ್ನ ಮೇಲೆ ಜವಾಬ್ದಾರಿಯನ್ನು ಇಟ್ಟುಕೊಳ್ಳುವ ಧೈರ್ಯ ಮಾಡಿ ಸಿಂಧೂರ (ಬೈತಲೆಯ ತಿಲಕ) ಇಟ್ಟುಕೊಂಡಿರುವ ಸದಾ ಸೌಭಾಗ್ಯವತಿ.